


ಹಂದಿಯ ಕೂಗು ಕೇಳಿ ಬರುವುದು ನಿಂತಿತು. ಬೆಳಗಾಯಿತು. ಸೂರ್ಯನ ಕಿರಣವು ತೊಗಲನ್ನು ಚುಚ್ಚಿದರೆ ಸಾಕು, ಮೊದಲು ಕೆಸರಿನೊಳಗೆ ನುಗ್ಗುತ್ತವೆ ದರಿದ್ರದವು. ದುಡು ದುಡು ಓಡುತ್ತವೆ. ಗುರುಗುಡುತ್ತ ಒಂದು ಮತ್ತೊಂದರ ಮೇಲೆ ಏರಿ ಹೋಗುತ್ತವೆ. ಇದೇ ಇಲ್ಲಿಯ ನಿಸರ್ಗ ಸಂಗೀತವಾಗಿದೆ. ಬ್ಯಾಕ್‌ಗ್ರೌಂಡ್ ಮ್ಯೂಸಿಕ್. ಅದರ ತಾಳದಂತೆ ನನ್ನ ದಂಧೆ ಶುರುವಾಗುತ್ತದೆ. ರುಮಾಲು ಹೊಡೆದು ಡಬ್ಬಿ, ಭರಣಿಯನ್ನು ಸ್ವಚ್ಛಗೊಳಿಸುತ್ತೇನೆ. ಈ ಲ್ಯಾಂಟಿಕ್ ಪೀಸ್‌ನ್ನು ಒರೆಸುತ್ತೇನೆ. ಎಲ್ಲ ಸಾಮಾನುಗಳನ್ನು ಅಲ್ಲಲ್ಲೇ ಇಡುತ್ತೇನೆ. ರಾತ್ರಿಯಿಂದಲೇ ಬಂದು ಕುಳಿತ ಗಿರಾಕಿಗಳು ಇದ್ದೇ ಇರುತ್ತಾರೆ. ಹೊರಗಿನ ರಸ್ತೆಯಲ್ಲಿ ನಿಂತಿರುತ್ತಾರೆ. ಅಲ್ಲೇ ಮಲಗುತ್ತಾರೆ. ಬೆಳಗ್ಗೆ ನಾನು ಗೋದಾಮು ತೆರೆದಾಕ್ಷಣ ಒಳಗೆ ನುಗ್ಗುತ್ತಾರೆ. ಎಲ್ಲರನ್ನೂ ಸರಿಯಾಗಿ ಹ್ಯಾಂಡಲ್ ಮಾಡಬೇಕಾಗುತ್ತದೆ. ನಾನು ಒಂದು ಟೈಮಿಗೆ ಒಂದೆರಡು ಗಿರಾಕಿಗಳನ್ನು ಮಾತ್ರ ಒಳಗೆ ಕರೆದುಕೊಳ್ಳುತ್ತೇನೆ. ಉಳಿದವರು ಲೈನ್‌ನಲ್ಲಿ ನಿಂತಿರಬೇಕು. ತುರಿಸಿಕೊಳ್ಳಲು ಪುರಸೊತ್ತು ಸಿಗುವುದಿಲ್ಲ. ದಣಿದು ಬಿಡುತ್ತೇನೆ. ಮಧ್ಯಾಹ್ನವಾಗುವ ದಾರಿ ಕಾಯುತ್ತೇನೆ. ಹಂದಿಯ ಧ್ವನಿ ಕೇಳಿಸದಿದ್ದರೆ ಮಧ್ಯಾಹ್ನವಾಯಿತೆಂದು ಅರ್ಥ. ಅನಂತರ ಹೊರಗೆ ಹಲಗೆ ಹಾಕಿ ಬೈಠಕ ಹೊಡೆಯುತ್ತೇನೆ. ಬಂಡಲ್‌ನಿಂದ ಒಂದು ಬೀಡಿ ತೆಗೆಯುತ್ತೇನೆ. ಬೆಂಕಿಕಡ್ಡಿ ಕೊರೆದು ಜೋರಾಗಿ ಝೂರ್ಕಿ ಎಳೆಯುತ್ತೇನೆ. ಸುಖ! ಆಹಾ ಕ್ಯಾ ಬಾತ್ ಹೈ. ಈ ಫೀಲಿಂಗ್ ಮಹತ್ವದ್ದು. ಹೀಗಿದು ಗಂಟಲಿಂದ ಎದೆಗೆ ಇಳಿಯುವಾಗ ಅನುಭವಿಸಬೇಕು ಮತ್ತು ಹೊಗೆ ಸುರುಳಿ–ಸುರುಳಿಯಾಗಿ ಗಾಳಿಯಲ್ಲಿ ಕರಗುವುದನ್ನು ನೋಡಬೇಕು. ಸುಖ, ಅದು ಹೇಗೆ ಸಿಗುತ್ತದೆ ಎನ್ನುವುದು ಇಮ್ಮಟಿರಿಯಲ್, ವಿವರಣೆ ಅನಗತ್ಯ. ಸುಖ ಪ್ರಾಪ್ತಿಯ ಸಾಧನಗಳು ಹೀಗೇ ಬೂದಿಯಾಗುತ್ತಿರುತ್ತವೆ. ಮತ್ತು ಗಾಳಿಯ ಜೊತೆಗೆ ಹಾರಿ ಹೋಗುತ್ತವೆ. ಆದುದರಿಂದ ಮಹತ್ವದ್ದು ಸುಖ. ಅದು ಹೇಗೆ ಲಭಿಸಿತು ಎಂಬ ಲೆಕ್ಕಾಚಾರ ಸುಳ್ಳು.

ಇದು ಗುಜರಿ ಬಾಬುವಿನ ಅಂಗಡಿ. ಔರ್ ಇಸ್ ನಾಚೀಜ್ ಕೋ ಬಾಬು ಭಂಗಾರವಾಲಾ ಕಹತೇ ಹೈ. ದಿನವಿಡೀ ವಿಶ್ರಾಂತಿ ಎನ್ನುವುದು ಸಿಗುವುದೇ ಇಲ್ಲ. ಆದರೆ, ಮಧ್ಯಾಹ್ನವಾದರೆ ಸಾಕು ಗಿರಾಕಿ ಬರೋದು ಗಕ್ಕನೆ ನಿಂತು ಬಿಡುತ್ತದೆ ಬ್ರೇಕ್ ಹೊಡೆದವರಂತೆ. ಊಟ ಮುಗಿಸಿ ನಿದ್ದೆ ಹೊಡೆಯುತ್ತೇನೆ. ಎರಡು ಗಂಟೆ ಯಾರೂ ಬರುವುದಿಲ್ಲ. ಅದು ನನ್ನ ನಿಯಮವೇ ಆಗಿದೆ. ಮಧ್ಯಾಹ್ನ ನನಗೆ ವಿಶ್ರಾಂತಿ ಬೇಕು. ದೇಹ ದಣಿಯುತ್ತದೆ. ತಲೆ ರೋಸಿ ಬಿಡುತ್ತದೆ, ಒಬ್ಬನೇ ಎಲ್ಲ ಹ್ಯಾಂಡಲ್ ಮಾಡುವಾಗ. ಆದುದರಿಂದ ನಿದ್ದೆ ಮಸ್ಟ್. ವಿಶ್ರಾಂತಿ ಮಹತ್ವದ್ದು. ಆದರೆ, ದರಿದ್ರದ್ದು ಈಗೀಗ ನಿದ್ದೆಯೇ ಬರುತ್ತಿಲ್ಲ. ವಯಸ್ಸಾಗಿದೆ ಎನ್ನಿ ಅಥವಾ ದೇಹದ ವಿವಂಚನೆ ಎನ್ನಿ. ಕಣ್ಣೇ ಹತ್ತುವುದಿಲ್ಲ. ಈ ನಿದ್ದೆ ಏಕೆ ಕಡಿಮೆಯಾಗಿದೆ ಎಂದು ಯೋಚಿಸಿ–ಯೋಚಿಸಿದ ಬಳಿಕವಾದರೂ ನಿದ್ದೆ ಬರುತ್ತದೆ ಎಂದರೆ ಅದೂ ಇಲ್ಲ.